ದಿನಾಂಕ 17-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿಗಳ ಪರ ಶ್ರೀ. ಜಿ.ಎಸ್.ಆರ್.ಕೆ. ವಕೀಲರಿಂದ

ನನ್ನ ಮಾವನ ಹೆಸರು ದೊಡ್ಡನಗೌಡ. ಅವರಿಗೆ ಇಬ್ಬರು ಗಂಡುಮಕ್ಕಳು, 4 ಜನ ಹೆಣ್ಣುಮಕ್ಕಳಿರುತ್ತಾರೆ. ದೊಡ್ಡನಗೌಡನ ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಏಕೆಂದರೆ ಅವರು ನನಗೆ ಸಂಪರ್ಕದಲ್ಲಲಿರುವುದಿಲ್ಲ. ಶಂಕರಗೌಡ ಮತ್ತು ಶಿವನಗೌಡನ ಅಕ್ಕತಂಗಿಯರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸದರಿಯವರಿಗೂ ದಾವಾ ಆಸ್ತಿಗಳಲ್ಲಿ ಭಾಗ ಬರುತ್ತದೆ ಎಂದರೆ ಸಾಕ್ಷಿಯು ಅವರು ನ್ಯಾಯಾಲಯಕ್ಕೆ ಬಂದರೆ ಅವರಿಗೂ ಸಹ ಭಾಗ ಬರುತ್ತದೆ ಎಂದು ನುಡಿಯುತ್ತಾರೆ. ಸದರಿಯವರಿಗೆ ದಾವಾ ಆಸ್ತಿಯಲ್ಲಿ ಭಾಗವನ್ನು ನೀಡಬಾರದೆಂಬ ಉದ್ದೇಶದಿಂದ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಿಲ್ಲ ಎಂದರೆ ಸರಿ.

ಶಂಕರಗೌಡ ಮತ್ತು ಶಿವನಗೌಡರವರ ತಂದೆಯವರ ಜೀವಿತ ಕಾಲದಲ್ಲಿ ದಾವಾ ಆಸ್ತಿಗಳಲ್ಲಿ ಭಾಗ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಭಾಗದಲ್ಲಿ ದಾವಾ 1 ಮತ್ತು 2 ಆಸ್ತಿಗಳು ನನ್ನ ಗಂಡನ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ 3 ಎಂದರೆ ಸರ್ವೆ ನಂ. 134/*/2, 4 ಎಕರೆ 22 ಗುಂಟೆ ಆಸ್ತಿಯನ್ನು ದೊಡ್ಡನಗೌಡರವರು ನನ್ನ ಗಂಡನ ವಿದ್ಯಾಭ್ಯಾಸಕ್ಕಾಗಿ ಮಹಾಂತಗೌಡರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ 4 ನೇ ಆಸ್ತಿ ಶಿವನಗೌಡರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಭಾಗ ಆಗಿದೆ ಎಂದು ಹೇಳಲಾದ ನಂತರ ಶಿವನಗೌಡ ಈತನು ಸರ್ವೆ ನಂ. 134/*/2 ಕ್ಷೇತ್ರ 4 ಎಕರೆ 28 ಗುಂಟೆ ಜಮೀನನ್ನು ತನ್ನ ಸ್ವಂತ ಸಂಪಾದನೆಯಿಂದ ಬಿಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ 3 ನೇ ಮತ್ತು 4 ನೇ ಆಸ್ತಿಗಳಿಗೂ ಮತ್ತು ನನಗೂ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಈ ದಾವಾ ಹೂಡುವ ಪೂರ್ವದಲ್ಲಿ ತಾಲೂಕು ಪಂಚಾಯತನೇದ್ದರಲ್ಲಿ ಪ್ರಕರಣ ಹೂಡಿದ್ದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಪ್ರತಿವಾದಿ ನಂ. 2 ರವರ ವಿರುದ್ಧ ಹೂಡಿದ್ದೆ. ತಾಲೂಕು ಪಂಚಾಯತಿ ಪ್ರಕರಣದಲ್ಲಿ ನಾನು ಹಕ್ಕುಬಿಡುಗಡೆ ಪತ್ರವನ್ನು ಹಾಜರುಪಡಿಸಿದ್ದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಹಕ್ಕು ಬಿಡುಗಡೆ ಪತ್ರ ಆಧಾರದಡಿಯಲ್ಲಿ ನನ್ನ ಗಂಡ ದಾವಾ ಆಸ್ತಿಗಳಲ್ಲಿ ಆತನಿಗೆ ಯಾವುದೇ ಹಕ್ಕು ಮತ್ತು ಅಧಿಕಾರಗಳು ಇರುವುದಿಲ್ಲ ಎಂದು ಹಕ್ಕು ಬಿಟ್ಟುಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ.

ದಾವಾ ಆಸ್ತಿ 1 ಮತ್ತು 2 ಗಳನ್ನು ಶಿವನಗೌಡ ನನ್ನ ಗಂಡನಿಗೆ ಬಿಟ್ಟು ಕೊಟ್ಟಿದ್ದ ಎಂದರೆ ಸರಿಯಲ್ಲ. ನನ್ನ ಗಂಡನು ಸದರಿ ಆಸ್ತಿಗಳನ್ನು ಆತನು ನೌಕರಿದಾರನಿದ್ದು, ಸದರಿ ಆಸ್ತಿಗಳು ಆತನಿಗೆ ಬೇಡ ಎಂದು ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿದ್ದ ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ಶಿವನಗೌಡ ತೀರಿಕೊಂಡಿರುತ್ತಾರೆ ಎಂದರೆ ಸರಿ. ಶಿವನಗೌಡ ಈತನು ನನ್ನ ಗಂಡ ತೀರಿಕೊಳ್ಳುವ 2 ವರ್ಷ ಪೂರ್ವದಲ್ಲಿ ತೀರಿಕೊಂಡಿರುತ್ತಾನೆ. ಸಾಕ್ಷಿ ಮುಂದುವರೆದು ನನ್ನ ಗಂಡನು 2006 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾನೆಂದು ನುಡಿಯುತ್ತಾರೆ. ದೊಡ್ಡನಗೌಡ ಈತನು ನಾನು ಶಂಕರಗೌಡನನ್ನು ಮದುವೆಯಾಗುವ ಪೂರ್ವದಲ್ಲಿ ತೀರಿಕೊಂಡಿರುತ್ತಾರೆ. ಅವರು ತೀರಿಕೊಂಡ ನಿರ್ದಿಷ್ಟವಾಗ ದಿನಾಂಕ ಗೊತ್ತಿಲ್ಲ. ನಾನು ಶಂಕರಗೌಡ ಈತನನ್ನು 1984 ರಲ್ಲಿ ಮದುವೆಯಾಗಿರುತ್ತೇನೆ. ದೊಡ್ಡನಗೌಡ ಈತನು ನಾನು ಶಂಕರಗೌಡನನ್ನು ಮದುವೆಯಾಗುವ 7 ರಿಂದ 8 ವರ್ಷಗಳ ಪೂರ್ವದಲ್ಲಿ ತೀರಿಕೊಂಡಿರುತ್ತಾನೆ. ದಾವಾ ಆಸ್ತಿಗಳಲ್ಲಿ ಯಾವುದೇ ಭಾಗ ಆಗಿರುವುದಿಲ್ಲ ಎಂದು ಸುಳ್ಳು ವಿಷಯ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಶಂಕರಗೌಡ ಮತ್ತು ಶಿವನಗೌಡ ಇವರು ದಾವಾ ಆಸ್ತಿಗಳಲ್ಲಿ ಯಾವುದೇ ವಿಭಾಗವನ್ನು ಮಾಡಿಕೊಳ್ಳದೇ ತೀರಿಕೊಂಡಿರುತ್ತಾರೆಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ದೊಡ್ಡನಗೌಡ ಈತನು 1979 ರಲ್ಲಿ ತೀರಿಕೊಂಡಿರುತ್ತಾನೆ ಎಂದರೆ ಇರಬಹುದು. 1983 84 ನೇ ಸಾಲಿನಲ್ಲಿ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಮೌಖಿಕವಾಗಿ ಭಾಗ ಆಗಿದೆ ಎಂದು ಹೇಳಲಾದ ವಿಷಯದಿಂದ ಅವರವರ ಹೆಸರಿನಲ್ಲಿ ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ.

ಅಥಣಿ ನಗರದಲ್ಲಿ ನನ್ನ ಗಂಡನಿಗೆ ಭಾಗದಲ್ಲಿ ಬಂದಂತಹ ಹಣದಿಂದ ಆಸ್ತಿಗಳನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ವಿನಾಃ ಕಾರಣ ಸದರಿ ಆಸ್ತಿಗಳನ್ನು ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಿರುವುದಿಲ್ಲ. ಸಿದ್ರಾಂಪುರದಲ್ಲಿರುವಂತಹ ಆಸ್ತಿಗಳನ್ನು ಪ್ರತಿವರ್ಷ ಸ್ವಲ್ಪ ಆದಾಯವನ್ನು ತೆಗೆದುಕೊಂಡು ಹೋಗುತ್ತಿರುತ್ತೇನೆ ಎಂದರೆ ಸರಿ. ಅಥಣಿಯಲ್ಲಿರುವ ಆಸ್ತಿಗಳನ್ನು ಈ ಸದರಿ ಉತ್ಪನ್ನದಿಂದ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ಆಸ್ತಿಯು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರು ಇರುತ್ತೇವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಿರುತ್ತವೆ ಎಂದು ಸುಳ್ಳು ಬರರೆಸಿದ್ದೇನೆ ಎಂದರೆ ಸರಿಯಲ್ಲ. ಬೆಳೆ ಭಾಗವನ್ನು ತೆಗೆದುಕೊಂಡು ಹೋಗುತ್ತಿದ್ದೇವೆಂದು ಸುಳ್ಳು ವಿಷಯ ಬರೆಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 1 ದಾಖಲೆಯನ್ನು ಕಂದಾಯ ಅಧಿಕಾರಿಗಳೊಂದಿಗೆ ಮಿಲಾಫೆಯಾಗಿ ಸುಳ್ಳು ಆದೇಶ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆದೇಶದಿಂದ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಮತ್ತು ಅಧಿಕಾರ ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆದೇಶದ ಬಗ್ಗೆ ನನಗೆ ಗಮನದಲ್ಲಿದ್ದರೂ ಸಹ ಸುಮಾರು 6 ರಿಂದ 7 ವರ್ಷಗಳ ಕಾಲ ನಾನು ಸುಮ್ಮನಿದ್ದೆ ಎಂದರೆ ಸರಿಯಲ್ಲ. ನಿ.ಪಿ. 4 ರ ಪ್ರಕಾರ ಶಂಕ್ರಪ್ಪರವರ ಹೆಸರಿಗೆ ಸದರಿಯಲ್ಲಿರುವ ಆಸ್ತಿಯು ಶಂಕ್ರಪ್ಪನವರ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಆಸ್ತಿಯನ್ನು ಪಂಚಾಯತಿಯವರು ಶಂಕ್ರಪ್ಪನವರಿಗೆ ಊಟ ಮಾಡಿಕೊಂಡು ಇರಿ ಎಂದು ಹೇಳಿರುತ್ತೇವೆ. ಸದರಿ ಆಸ್ತಿಯು ನನ್ನ ಗಂಡನಿಗೆ ಭಾಗದಲ್ಲಿ ಬಂದಂತಹ ಆಸ್ತಿ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ಆಸ್ತಿ ನನ್ನ ಗಂಡನ ಹೆಸರಿನಲ್ಲಿ ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ 1 ಮತ್ತು 2 ಆಸ್ತಿಗಳಿಗೆ ಸಂಬಂಧಿಸಿದಂತೆ ಭಾಗ ಆಗಿದೆ ಎಂದು ಹೇಳಲಾದ ವಿಷಯದಿಂದ ಪ್ರತಿವಾದಿಗಳು ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನು ತೀರಿಕೊಂಡ ನಂತರ 34 ಗುಂಟೆ ಆಸ್ತಿಯನ್ನು ನನ್ನ ಹೆಸರಿನಲ್ಲಿ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಷಯಕ್ಕೆ ಪ್ರತಿವಾದಿಗಳು ಯಾವುದೇ ತಕರಾರು ಮಾಡಿರುವುದಿಲ್ಲ

ಎಂದರೆ ಸರಿಯಲ್ಲ. ನಿ.ಪಿ. 25ರ ಪ್ರಕಾರ ದಾವಾ 2ನೇ ಆಸ್ತಿಯು ನನ್ನ ಗಂಡನಾದ ಶಂಕರಗೌಡ ಇವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಷಯಕ್ಕೆ ಪ್ರತಿವಾದಿಗಳು ಯಾವುದೇ ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ. 39ರ ಪ್ರಕಾರ ಸದರಿ ಆಸ್ತಿಯನ್ನು ನನ್ನ ಯಜಮಾನರು ತೀರಿಕೊಂಡ ನಂತರ ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ. ದೊಡ್ಡನಗೌಡ ಈತನು ದಾವಾ 3ನೇ ಆಸ್ತಿಯು ಮಹಾಂತಯ್ಯ ಈತನಿಗೆ ಮಾರಾಟ ಮಾಡಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಆಸ್ತಿಯನ್ನು ಶಿವನಗೌಡ ಈತನು ತನ್ನ ಮದುವೆಗೋಸ್ಕರ ಮಹಾಂತಯ್ಯ ಈತನಿಗೆ ಒತ್ತಿ ಇಟ್ಟಿದ್ದನು ಎಂದು ನುಡಿಯುತ್ತಾರೆ. ಸದರಿ ವಿಷಯವು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ದೊಡ್ಡನಗೌಡ ಈತನು ನನ್ನ ಗಂಡನ ವಿದ್ಯಾಭ್ಯಾಸಕ್ಕೋಸ್ಕರ ಮಹಾಂತಯ್ಯ ಈತನಿಗೆ ಮಾರಾಟ ಮಾಡಿದ್ದ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಶಿವನಗೌಡ ಈತನು ಮಹಾಂತಯ್ಯ ಈತನಿಂದ ಮರು ಖರೀದಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳ ಮೇಲೆ ನನಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಮಲ್ಲನಗೌಡ ಈತನು ಶಿವನಗೌಡ ತೀರಿಕೊಂಡ ನಂತರ ಆಸ್ತಿಯನ್ನು ತನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನನಗೆ ಗೊತ್ತಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ನಾನು ಯಾವುದೇ ತಕರಾರು ವ್ಯಕ್ತಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿ: 27/11/2017 ರಂದು ಸದರಿ ಆಸ್ತಿಯು ಮಲ್ಲನಗೌಡ ಈತನ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸೋಮನಗೌಡ ತಂ. ಅಯ್ಯನಗೌಡ ನಮ್ಮ ಹೊಲದ ಪಕ್ಕದವರು ಇರುತ್ತಾರೆ. ಸದರಿಯವರಿಗೆ ಪ್ರತಿ ಬೆಳೆಗೆ ನಾನು ಬಂಡವಾಳ ಕೊಡುತ್ತೇನೆ ಎಂದರೆ ಸರಿಯಲ್ಲ. ಆತನಿಂದ ನಾನು ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರವನ್ನು ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ. ಶಿವನಗೌಡ ಈತನು ದಾವಾ 4ನೇ ಆಸ್ತಿಯು ಮಹಾಂತಯ್ಯನಿಂದ ದಿ: 18/11/1983 ರಂದು ಖರೀದಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿ 3 ಮತ್ತು 4 ರ ಮೇಲೆ ಯಾವುದೇ ರೀತಿ

ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದ ಸುಳ್ಳು ದಾವಾ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವ ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

2 ನೇ ಅಪರ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ, ಸಿಂಧನೂರು.